Os No. 6191/2011
DW 1

ಸಾಕ್ಷಿಯನ್ನು ಕರೆಸಿ ದಿನಾಂಕ ಃ 08.01.2019 ರಂದು ಪ್ರಮಾಣೀಕರಿಸಲಾಯಿತು.

ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀಸವಾಲು ಃ ವಾದಿ ಪರ ವಕೀಲರಿಂದ ಃ

ನಾನು 7 ನೇ ತರಗತಿ ಅನುತ್ತೀರ್ಣ. ನನ್ನ ವಿಳಾಸದಲ್ಲಿ ನೃತ್ಯ ಶಾಲೆ ಇರುತ್ತದೆ. ನಾನು ಸದರಿ ಶಾಲೆಯ ಉಸ್ತುವಾರಿಯನ್ನು ನೋಡಿಕೊಳ್ಳುತ್ತೇನೆ. ನಿಪಿ 1 ರಲ್ಲಿರುವ ಸಹಿಯು ನನ್ನದಾಗಿರುತ್ತದೆ. ಸಾಕ್ಷಿಯು ಸದರಿ ದಾಖಲೆಯ ಪುಟ ಸಂಖ್ಯೆ 1 ರಿಂದ 3 ರಲ್ಲಿರುವ ತನ್ನ ಸಹಿಗಳನ್ನು ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 1 (ಕೆ ) ನಿಂದ 1(ಎಂ) ಎಂದು ಗುರುತಿಸಲಾಗಿದೆ . ನಿಪಿ 1 ರ ಪುಟ ಸಂಖ್ಯೆ 7 ರಲ್ಲಿರುವ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು ಅದನ್ನು ನಿಪಿ 1 (ಎನ್) ಎಂದು ಗುರುತಿಸಲಾಗಿದೆ. ಸಾಕ್ಷಿಯು ನಿಪಿ 1 ರಲ್ಲಿರುವ ಇತರೇ ಸಹಿಗಳನ್ನು ತನ್ನದಲ್ಲ ಎಂದು ಹೇಳುತ್ತಾರೆ. ನಿಪಿ 1 (ಇ) ಈಗಾಗಲೇ ಗುರುತಿಸಿದ್ದು ಸದರಿ ಸಹಿಯು ನನ್ನದಾಗಿರುತ್ತದೆ. ನನ್ನ ಪರವಾಗಿ ಇತರೇ ಸಾಕ್ಷಿದಾರರ ವಿಚಾರಣೆ ಇರುವುದಿಲ್ಲ. ನಾನು ದಾವಾ ಸ್ವತ್ತನ್ನು ಯಾವಾಗ ಖರೀದಿ ಮಾಡಿದ್ದೇನೆ ಎಂದು ದಾಖಲೆ ನೋಡದೇ ಹೇಳಲು ಆಗುವುದಿಲ್ಲ. ದಾವಾ ಸ್ವತ್ತನ್ನು ಖರೀದಿ ಮಾಡುವಾಗ ಸಂಬಂಧಿಕರಿಂದ ಸಾಲ ಪಡೆದಿದ್ದೆನು. ಸುಮಾರು 4 ಲಕ್ಷ ರೂಗಳನ್ನು ಸಾಲ ಪಡೆದಿದ್ದೆನು. ದಾವಾ ಸ್ವತ್ತಿಗೆ ಸಂಬಂಧಪಟ್ಟ ಮೂಲ ದಾಖಲೆಗಳು ನ್ಯಾಯಾಲಯದಲ್ಲಿ ಇರುತ್ತವೆ. ನಾನು ಮೂಲ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ವಿಠಲ್ ಮೂರ್ತಿಯವರು ವಾದಿಯ ಸ್ನೇಹಿತರು . ಸದರಿ ವಾದಿಯ ಕಡೆಯಿಂದ ನನಗೆ

Os No. 6191/2011
DW 1

ಪರಿಚಯವಾಗಿರುತ್ತಾರೆ . ನಾಗರಾಜ್‌ರವರು ವಾದಿಯ ಸ್ನೇಹಿತರು . ನಿಪಿ 1 ರಲ್ಲಿ 10 ಲಕ್ಷ ರೂಗಳ ಚೆಕ್‌ನ ಬಗ್ಗೆ ನಮೂದು ಇರುವುದಿಲ್ಲ. ಸಾಕ್ಷಿಯು ಮುಂದುವರೆದು ನನ್ನ ಹಿಂದಿನ ವಕೀಲರು ತಪ್ಪಾಗಿ ಲಿಖಿತ ಹೇಳಿಕೆಯಲ್ಲಿ ಚೆಕ್ ಎಂದು ಹೇಳಿರುತ್ತಾರೆ ಎಂದು ಹೇಳುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ವಕೀಲರು ಕಾಲವಕಾಶವನ್ನು ಕೋರಿದ್ದು ಸಮಯವನ್ನು ನೀಡಲಾಯಿತು.

(ನನ್ನ ಉಖ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಮತ್ತು ಸ. ಇ

(ನಾಗವೇಣಿ)
5 ನೇ ಅಪರ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ನ್ಯಾಯಾಂಗಣ 13, ಬೆಂಗಳೂರು ನಗರ .